# ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿನ ಉಪ ನಿರ್ದೇಶಕರ ಹುದ್ದೆಯ ನಿರ್ದಿಷ್ಟ ಪತ್ರಿಕೆಯ ಪಠ್ಯಕ್ರಮ

## ಪಠ್ಯಕ್ರಮ

1)ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ರಚನೆ ಪ್ರಕಾರ್ಯಗಳು ಮತ್ತು ಕರ್ತವ್ಯಗಳು

- ಇಲಾಖೆಯ ಉದ್ದೇಶ ಸಾಧನೆಗಳಿಗಾಗಿ ಹಮ್ಮಿಕೊಂಡಿರುವ ಕಾರ್ಯಕ್ರಮ/ಯೋಜನೆಗಳ ಉತ್ಸವಗಳ ಪರಿಚಯ, ಉದ್ದೇಶ.
- ಇಲಾಖೆಯ ಪ್ರಕಟಣೆಗಳ ಪರಿಚಯ ಹಾಗೂ ಲೇಖಕರನ್ನು ಪ್ರೋತ್ಸಾಹಿಸಲು ಇರುವ ಇಲಾಖೆಯ ಯೋಜನೆಗಳ ಪರಿಚಯ
- ಇಲಾಖೆಯ ಅಧೀನದಲ್ಲಿರುವ ಅಕಾಡೆಮಿಗಳ/ಪ್ರಾಧಿಕಾರಿಗಳ ಪರಿಚಯ, ಸ್ಥಾಪಿಸಿರುವ ಉದ್ದೇಶ ಹಾಗೂ ಕಾರ್ಯ ನಿರ್ವಹಣೆಯ ಕಿರುಪರಿಚಯ.
- ಸಾಂಸ್ಕೃತಿಕ ಪರಿಕರಗಳಿಗೆ ಧನ ಸಹಾಯ, ಸಾಂಸ್ಕೃತಿಕ ಮಂದಿರಗಳಿಗೆ ಧನ ಸಹಾಯ, ಗ್ರಂಥ ಪ್ರಕಟಣೆಗೆ ಧನ ಸಹಾಯ, ಸಂಘ ಸಂಸ್ಥೆಗಳಿಗೆ ಧನ ಸಹಾಯ ಹಾಗೂ ಪ್ರಾಯೋಜಿತ ಕಾರ್ಯಕ್ರಮ, ಮಾಶಾಸನ ಯೋಜನೆಗಳ ಅನುಷ್ಠಾನಕ್ಕೆ ಅನುಸರಿಸುವ ಬಗೆಗಿನ ಮಾರ್ಗ ಸೂಚಿಗಳು.
- ಇಲಾಖೆಯ ವತಿಯಿಂದ ನೀಡುವ ವಿವಿಧ ಪ್ರಶಸ್ತಿಗಳ ಪರಿಚಯ, ಹಿನ್ನೆಲೆ ಹಾಗೂ ಮಾರ್ಗಸೂಚಿಗಳು ಹಾಗೂ ಈವರೆಗೆ ನೀಡಲಾಗಿರುವ-ಪ್ರಶಸ್ತಿ ಮಾಹಿತಿ.
- ಇಲಾಖೆ ಹಮ್ಮಿಕೊಂಡಿರುವ ಕನ್ನಡ ಅಭಿವೃದ್ಧಿ ಯೋಜನೆಗಳಿಗೆ ಸಂಬಂಧಿತ ಕಾರ್ಯಕ್ರಮಗಳ ಪರಿಚಯ
- ಇಲಾಖೆ ಸ್ಥಾಪಿಸಿರುವ/ಪ್ರೋತ್ಸಾಹಿಸುತ್ತಿರುವ ಟ್ರಸ್ಟ್‌ಗಳ ಸ್ವರೂಪ ಮತ್ತು ಕಾರ್ಯ ವಿಧಾನಗಳು/ಕಾರ್ಯಕ್ರಮಗಳು
- ಹೊರ ರಾಜ್ಯ/ದೇಶದಲ್ಲಿರುವ ಕನ್ನಡ ಸಂಘ ಸಂಸ್ಥೆಗಳ ಸ್ವರೂಪ ಕಾರ್ಯ ವಿಧಾನಗಳು/ಕಾರ್ಯಕ್ರಮಗಳು.
- ಕನ್ನಡ ಸಾಹಿತ್ಯ ಸಮ್ಮೇಳನಗಳು, ಜಯಂತಿಗಳು ಉತ್ಸವಗಳ ಪರಿಚಯ
- ಕನ್ನಡ ಸಾಹಿತಿಗಳು ಕಲಾವಿದರು, ಸುಗಮ ಸಂಗೀತಕಾರರು ವಿಜ್ಞಾನಿಗಳು ಪರಿಸರ ತಜ್ಞರು ಇವರಿಗೆ ಹೊರರಾಜ್ಯ/ಅಂತರಾಷ್ಟ್ರೀಯ ಮಟ್ಟದಲ್ಲಿ ಸಿಕ್ಕಿರುವ ಮನ್ನಣೆಗಳು/ಪ್ರಶಸ್ತಿಗಳು.

2) ಕನ್ನಡ ಸಾಹಿತ್ಯ ಚರಿತ್ರೆ:

- ಪಂಪ ಪೂರ್ವಯುಗ - ಪಂಪ ಯುಗ - ವಚನ ಯುಗ - ಕುಮಾರವ್ಯಾಸಯುಗದ ಸಾಹಿತ್ಯಿಕ ಸಾಂಸ್ಕೃತಿಕ ಮಹತ್ವ (ಹಳೆಗನ್ನಡ, ನಡುಗನ್ನಡ, ಹೊಸಗನ್ನಡ ಹಾಗೂ ಜಾನಪದ ಸಾಹಿತ್ಯದ ಬಗ್ಗೆ, ಕವಿಗಳ ಪರಿಚಯ
- ಚಂಪೂ, ವಚನ, ರಗಳೆ, ಷಟ್ಪದಿ, ಸಾಂಗತ್ಯ, ಗದ್ಯ ಈ ಸಾಹಿತ್ಯ ಪ್ರಕಾರಗಳಿಗೆ ಸಂಬಂಧಿಸಿದ ಪ್ರಮುಖ ಕವಿ, ಕೃತಿಗಳ ಪರಿಚಯ
- ಆಧುನಿಕ ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳು, ಮುಖ್ಯ ಕವಿಕೃತಿಗಳ ಪರಿಚಯ

3)ಕರ್ನಾಟಕ ಸಂಸ್ಕೃತಿ ಸಮೀಕ್ಷೆ:

- ಕರ್ನಾಟಕ ಸಂಸ್ಕೃತಿಯ ಪ್ರಾಚೀನತೆ
- ಕರ್ನಾಟಕದಲ್ಲಿನ ಕಲೆ, ವಾಸ್ತುಶಿಲ್ಪ ಮತ್ತು ಪುರಾತನ ಶಾಸನಗಳು
- ಕರ್ನಾಟಕದಲ್ಲಿ ನಡೆದ ಸ್ವಾತಂತ್ರ್ಯ ಚಳುವಳಿ ಹಾಗೂ ಕರ್ನಾಟಕ ಏಕೀಕರಣ ಚಳುವಳಿ.
- ಏಕೀಕರಣಗೊಂಡ ನಂತರ ಕನ್ನಡ ನೆಲ ಭಾಷೆ, ಜಲ ಇವುಗಳ ನಡೆದ ಹೋರಾಟಗಳು ಚಳುವಳಿಗಳು
- ಕನ್ನಡ ಅಭಿವೃದ್ಧಿಗಾಗಿ ರಚನೆಗೊಂಡ ಸಮಿತಿಗಳು

ರಾಜಮನೆತನಗಳು: ಮೌರ್ಯ (ಚಂದ್ರಗುಪ್ತ-ಅಶೋಕ), ಸಾತವಾಹನ (ಗೌತಿಮ ಪುತ್ರ ಸಾತಕರ್ಣಿ-ಹಾಲರಾಜ), ಕದಂಬ (ಮಯೂರವರ್ಮ-ಕಾಕುತ್ಸವರ್ಮ), ಗಂಗ (ದುರ್ವಿನೀತ -ಶ್ರೀಪುರುಷ) ಬಾದಾಮಿ ಚಾಲುಕ್ಯ (ಇಮ್ಮಡಿ ಪುಲಕೇಶಿ - ಇಮ್ಮಡಿ

ವಿಕ್ರಮಾದಿತ್ಯ), ರಾಷ್ಟ್ರಕೂಟ (ಮುಮ್ಮಡಿ ಗೋವಿಂದ-ಅಮೋಘವರ್ಷ-ನೃಪತುಂಗ-ಮುಮ್ಮಡಿ ಕೃಷ್ಣ), ಕಲ್ಯಾಣ ಚಾಲುಕ್ಯ (ಸತ್ಯಾಶ್ರಯ ಇರಿವಬೆಡಂಗ - ಇಮ್ಮಡಿ ಜಯಸಿಂಹ - ಆರನೆಯ ವಿಕ್ರಮಾದಿತ್ಯ), ಕಲಚೂರ್ಯ (ಬಿಜ್ಜಳ), ಹೊಯ್ಸಳ (ವಿಷ್ಣುವರ್ಧನ-ಇಮ್ಮಡಿ ಬಲ್ಲಾಳ), ವಿಜಯನಗರ (ಇಮ್ಮಡಿ (ಪ್ರೌಢ)ದೇವರಾಯ-ಕೃಷ್ಣದೇವರಾಯ) ಬಹಮನಿ (ಆಧೀಲ್ ಶಾಯಿ ಅರಸರು), ಮೈಸೂರು (ಚಿಕದೇವರಾಜನ-ಮುಮ್ಮಡಿ ಕೃಷ್ಣರಾಜ)

<u>ಕಲೆ ಮತ್ತು ಸಾಂಸ್ಕೃತಿ ಕೇಂದ್ರಗಳು:</u>

ಬನವಾಸಿ, ತಲಕಾಡು, ಶ್ರವಣಗೆಳಗೊಳ, ಬಾದಾಮಿ-ಐಹೊಳೆ-ಪಟ್ಟದಕಲ್ಲು, ಬೇಲೂರು- ಹಳೇಬೀಡು-ಸೋಮನಾಥಪುರ,ಹಂಪಿ, ಶ್ರೀರಂಗಪಟ್ಟಣ-ಮೈಸೂರು ಮತ್ತು ಬೆಂಗಳೂರು.

ಸಾಹಿತ್ಯ ಸಂಸ್ಥೆಗಳು:

ಮಂಗಳೂರು ಬಾಸೆಲ್ ಮಿಷನ್, ಕರ್ನಾಟಕ ವಿದ್ಯಾವರ್ಧಕ ಸಂಘ, ಕನ್ನಡ ಸಾಹಿತ್ಯ ಪರಿಷತ್ತು, ಹಂಪಿ ಕನ್ನಡ ವಿಶ್ವವಿದ್ಯಾನಿಲಯ, ನೀನಾಸಂ ಹೆಗ್ಗೋಡು ರಂಗಾಯಣ ಮೈಸೂರು.

ಸಾಹಿತ್ಯ ನಿಯತಕಾಲಿಕೆಗಳು:

ವಾಗ್ಭೂಷಣ, ಜಯಂತಿ, ಜಯಕರ್ನಾಟಕ, ಜೀವನ, ಪ್ರಬುದ್ಧ ಕರ್ನಾಟಕ, ಪರಿಷತ್ಪತ್ರಿಕೆ, ಕರ್ನಾಟಕ ಭಾರತಿ, ಸಾಧನೆ, ಸಾಕ್ಷಿ, ಸಂಕ್ರಮಣ, ಋಜುವಾತು, ಸಂಚಯ, ಹೊಸತು ಮತ್ತು ಅರುಹುಕುರುಹು.

ಸಾಹಿತ್ಯ ಪ್ರಶಸ್ತಿಗಳು:

ಜ್ಞಾನಪೀಠ, ಕೇಂದ್ರ ಸಾಹಿತ್ಯ ಅಕಾಡೆಮಿ, ರಾಷ್ಟ್ರಕರವಿ, ಪಂಪ, ಕನಕ ಪುರಂದರ ಡಾ:ಗುಬ್ಬಿ ವೀರಣ್ಣ ಮತ್ತು ಅತ್ತಿಮಬ್ಬೆ.

)ಕರ್ನಾಟಕ ವೈವಿಧ್ಯತೆಯ ಪರಿಚಯ:

- ನದಿಗಳು, ನಿಸರ್ಗಧಾಮಗಳು, ಜೀವಸಂಕುಲಗಳು, ಸಸ್ಯ ಹಾಗೂ ಖನಿಜ ಸಂಪತ್ತು, ಆಚರಣೆಗಳು ಕಲಾಪ್ರಕಾರಗಳು.

**04)ಕನ್ನಡ ಭಾಷಾ ಬಳಕೆ:**

- ವಿಶ್ವವಿದ್ಯಾಲಯದ ಪದವಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ವಿದ್ಯಾರ್ಥಿಗಳಿಗೆ ಇರಬೇಕಾದ ವಿದ್ಯಾಮಟ್ಟಕ್ಕೆ ಸಮನಾಗಿ, ಕನ್ನಡ ವ್ಯಾಕರಣ, ಶಬ್ದ ಸಂಪತ್ತು, ಕಾಗುಣಿತ, ಸಮನಾರ್ಥಕ ಪದಗಳು, ವಿರುದ್ಧಾರ್ಥಕ ಪದಗಳ ಪರಿಜ್ಞಾನ ಹಾಗೂ ಕನ್ನಡ ಭಾಷೆಯನ್ನು ಅರಿಯುವ ಮತ್ತು ಗ್ರಹಿಸುವ ಶಕ್ತಿಯ ಜೊತೆಗೆ ಭಾಷೆಯ ಸರಿ ತಪ್ಪು ಬಳಕೆಯನ್ನು ಪರಿಶೀಲಿಸುವ ಸಾಮರ್ಥ್ಯ ಲಿಂಗ, ವಿಭಕ್ತಿ ಪ್ರತ್ಯಯ, ಕ್ರಿಯಾಪದ, ಕಾಲಗಳು, ಕನ್ನಡ ತಂತ್ರಾಂಶದ ನುಡಿಯ/ಬರಹದ ಕಂಪ್ಯೂಟರ್ ಜ್ಞಾನ, ಕನ್ನಡ ಭಾಷೆಯ ಮೇಲೆ ವಿವಿಧ ಭಾಷೆಗಳ ಅಥವಾ ವಿವಿಧ ಭಾಷೆಗಳ ಪದಗಳು ಕನ್ನಡ ಭಾಷೆ/ಬರಹದಲ್ಲಿ ಬಳಕೆ